

ಮದ್ಯಪಾನ ಮತ್ತು ಧೂಮಪಾನ ಸಂತಾನಶಕ್ತಿಗೆ ಮಾರಕ

ಕೂಡಿರುತ್ತವೆ. ಮೈಕ್ರೊಸ್ಕೋಪ್‌ನಲ್ಲಿ ನೋಡಿದಾಗ ವೀರ್ಯಾಣುಗಳ ಆಕಾರ ಸರಿಯಾಗಿರಬೇಕು. ಓವಲ್ ಶೇಪ್‌ನಲ್ಲಿರುವ ವೀರ್ಯಾಣುವಿನ ತಲೆ, ಕತ್ತು, ಬಾಲ ಎಲ್ಲವೂ ಪರಿಪೂರ್ಣವಾಗಿರಬೇಕು. ಕೆಲವು ಸಲ ಗಾತ್ರದಲ್ಲಿ ಚಿಕ್ಕದು ಇಲ್ಲವೇ ದೊಡ್ಡದು, ಎರಡು ತಲೆಯಿಂದ ಕೂಡಿದ್ದು, ಬಾಲ ಚಿಕ್ಕದು, ಕರ್ವ್ ಆಗಿ... ಹೀಗೆ ಬೇರೆ ಬೇರೆ ರೀತಿಯಲ್ಲಿರುತ್ತವೆ. ಇವುಗಳನ್ನು ಅಸಹಜ ವೀರ್ಯಾಣು (**abnormal sperm**) ಎಂದು ಕರೆಯಲಾಗುತ್ತದೆ.

ಕೆಲವರಲ್ಲಿ 15 ದಶಲಕ್ಷ ವೀರ್ಯಾಣುಗಳು ಇದ್ದರೂ ಅವುಗಳಲ್ಲಿ ಆರು ದಶಲಕ್ಷ ಮಾತ್ರ ಗುಣಮಟ್ಟ ಹೊಂದಿರುತ್ತವೆ. ಇನ್ನು ಕೆಲವರಲ್ಲಿ ಒಂದು ದಶಲಕ್ಷ ಮಾತ್ರ ಚೆನ್ನಾಗಿರುವುದು ಇರುತ್ತವೆ. ಕೆಲವರಲ್ಲಿ ವೀರ್ಯಾಣುಗಳ ಚಲನೆಯೂ ಸಮರ್ಪಕವಾಗಿ ಇರುವುದಿಲ್ಲ. ಇವೆಲ್ಲವೂ ಮಗುವಾಗಲು ತೊಡಕಾಗಿ ಪರಿಣಮಿಸುತ್ತವೆ.

ವೀರ್ಯಾಣುಗಳಿಗೆ ಸೋಂಕು ತಗಲುವುದು ಮತ್ತೊಂದು ಸಮಸ್ಯೆ. ಕೆಲವರಲ್ಲಿ ವೃಷಣ ಬೀಜಗಳು ಒಂದೇ ಮಟ್ಟದಲ್ಲಿ ಇರದೆ ಮೇಲೆ ಕೆಳಗೆ ಇರುತ್ತವೆ. ಇನ್ನೂ ಕೆಲವರಿಗೆ ವೃಷಣದಲ್ಲಿ ಒಂದು ಭಾಗ ಹೊಟ್ಟೆಯ ಒಳಗಡೆ ಸೇರಿರುತ್ತದೆ. ಇದನ್ನು 'ಅನ್‌ಡಿಸೆಂಡೆಡ್ ಟೆಸ್ಟಿಸ್' ಎಂದು ಕರೆಯಲಾಗುತ್ತದೆ. ವೃಷಣಗಳು ಯಾವಾಗಲೂ ಹೆಚ್ಚು ಉಷ್ಣತೆಯಿಂದ ಕೂಡಿರಬಾರದು. ಅದು ದೇಹದೊಳಗೆ ಸೇರಿಕೊಂಡರೆ ದೇಹದ ಉಷ್ಣತೆಯಿಂದಾಗಿ ವೀರ್ಯಾಣುಗಳ ಉತ್ಪಾದನೆಗೆ ತೊಡಕಾಗುತ್ತದೆ. ಅದಕ್ಕಾಗಿಯೇ ವೃಷಣಗಳು ದೇಹದ ಹೊರಭಾಗದಲ್ಲಿ ನಿರ್ಮಿತವಾಗಿರುವುದು.

> ಮಗುವಾಗಬೇಕಾದರೆ ಒಂದೇ ಒಂದು ವೀರ್ಯಾಣುವಿನ ಅವಶ್ಯಕತೆ ಸಾಕಾದರೂ, ವೃಷಣದಲ್ಲಿ ವೀರ್ಯಾಣುಗಳ ಸಂಖ್ಯೆ ನಿಗದಿತ ಮಟ್ಟದಲ್ಲಿ ಇರಲೇಬೇಕು.
>
> **-ಡಾ. ದೇವಿಕಾ ಗುಣಶೀಲ,**
> ಸ್ತ್ರೀರೋಗ ಮತ್ತು ಐವಿಎಫ್ ತಜ್ಞೆ, ಬೆಂಗಳೂರು



ಕೈಗಾರಿಕೆಗಳಲ್ಲಿ ಕೆಲಸ ಮಾಡುವವರಲ್ಲಿ, ಬಿಸಿಲಲ್ಲೇ ಇಡೀ ದಿನ ಕೆಲಸ ಮಾಡುವ ಕಾರ್ಮಿಕರಲ್ಲಿ, ಕೀಮೊಥೆರಪಿ, ಹಾರ್ಮೋನ್ ಥೆರಪಿ ತೆಗೆದುಕೊಳ್ಳುವ ರೋಗಿಗಳಲ್ಲಿ ಗುಣಮಟ್ಟದ ವೀರ್ಯಾಣುಗಳ ಉತ್ಪಾದನೆ ಕಷ್ಟ.

ಶೀಘ್ರಸ್ಖಲನದ ಸಮಸ್ಯೆ ಪುರುಷ ಬಂಜೆತನಕ್ಕೆ ಮತ್ತೊಂದು ಕಾರಣ. ಕೆಲವು ಪುರುಷರಲ್ಲಿ ನಿಮಿರು ದೌರ್ಬಲ್ಯ ಇರುತ್ತದೆ. ಇನ್ನು ಕೆಲವು ಪುರುಷರು ಮಿಲನದಲ್ಲಿ ತೊಡಗಿದಾಗ ವೀರ್ಯಾಣುಗಳು ಹೊರಗೆ ಬರುವುದಿಲ್ಲ. ಆದರೆ ಅವರಿಗೆ ವೀರ್ಯ ಹೊರಗೆ ಬಂದಿದೆ ಎಂಬ ಭಾವನೆ ಉಂಟಾಗಿರುತ್ತದೆ. ವೀರ್ಯ ಹೊರಗೆ ಬರುವ ದಾರಿಯೇ ಮುಚ್ಚಿರುತ್ತದೆ. ಕೆಲವು ಸಂದರ್ಭಗಳಲ್ಲಿ ವೀರ್ಯಾಣು ಹೊರಗೆ ಬರದೇ ವಾಪಸ್ ಹೋಗಿರುತ್ತದೆ. ಇದನ್ನು 'ರಿಟ್ರೊಗ್ರೇಡ್ ಇಜಾಕ್ಯುಲೇಷನ್' ಎಂದು ಕರೆಯಲಾಗುತ್ತದೆ. ಈ ಸಮಸ್ಯೆಗಳನ್ನು ಸೂಕ್ತ ಚಿಕಿತ್ಸೆಯಿಂದ ಸರಿಪಡಿಸಬಹುದು.

ಕೆಲವು ಪುರುಷರಲ್ಲಿ ನರದೌರ್ಬಲ್ಯ ಸಮಸ್ಯೆ ಇರುತ್ತದೆ. ಇದರಿಂದ ಲೈಂಗಿಕ ಕ್ರಿಯೆಯಲ್ಲಿ ನಿರಾಸಕ್ತಿ ಉಂಟಾಗುತ್ತದೆ. ರಕ್ತ ಸಂಚಾರ ಸುಗಮವಾಗಿರದೇ ಇದ್ದ ಸಂದರ್ಭದಲ್ಲಿ, ವೀರ್ಯಾಣುಗಳು ವೃಷಣಗಳಿಂದ ಶಿಶ್ನದ ಕಡೆಗೆ ಸಾಗುವ ಕೊಳವೆಗಳಲ್ಲಿ ಅಡೆತಡೆಗಳು ಉಂಟಾಗಿದ್ದಲ್ಲಿ, ಮಾನಸಿಕ ಸಮಸ್ಯೆ ಇರುವ ಪುರುಷರಲ್ಲಿ, ಮಧುಮೇಹ ನಿಯಂತ್ರಣದಲ್ಲಿ ಇಲ್ಲದವರಲ್ಲಿ, ಖಿನ್ನತೆಗೊಳಗಾದವರಲ್ಲಿ, ಮಗುವಾಗುತ್ತೋ ಇಲ್ಲವೋ ಎಂದು ಒತ್ತಡ, ಆತಂಕಗಳಲ್ಲೇ ಲೈಂಗಿಕ ಕ್ರಿಯೆ ನಡೆಸುವವರಲ್ಲಿ ಮಕ್ಕಳಾಗುವ ಸಾಧ್ಯತೆ ಇಲ್ಲವೇ ಇಲ್ಲ.

ಪ್ರತಿಕ್ರಿಯಿಸಿ: **feedback@sudha.co.in**